ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 43 ಚಾಸಾ- 49**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸತೀಶ್ ಶೆಟ್ಟಿ |
| ತಂದೆಯ ಹೆಸರುಃ | : | ಸುಂದರ್ ಶೆಟ್ಟಿ |
| ವಯಸ್ಸುಃ | : | 54 ವರ್ಷ |
| ಉದ್ಯೋಗಃ | : | ಮ್ಯಾನೇಜರ್, ಸಪ್ನಾ ಫಾರ್ಮಾಸ್ಯೂಟಿಕಲ್ಸ್ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 23-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಕಳೆದ 1996ರಿಂದ ಇಂದಿನವರೆಗೆ ಸಪ್ನಾ ಫಾರ್ಮಾಸ್ಯೂಟಿಕಲ್ಸ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. 2002 ರಿಂದ 2010ರವರೆಗೆಬೆಂಗಳೂರಿನ ಚಾಮರಾಜಪೇಟೆಯ ಅಲಕಾ ಪ್ಲಾಜಾ 2ನೇ ಮಹಡಿಯಲ್ಲಿ ಸಪ್ನಾ ಫಾರ್ಮಾಸ್ಯೂಟಿಕಲ್ಸ್ ನಡೆಯುತ್ತಿತ್ತು. ಸಪ್ನಾ ಫಾರ್ಮಾಸ್ಯೂಟಿಕಲ್ಸ್ ಹೋಲ್ಸೇಲ್ ಡ್ರಗ್ ಏಜೆಂಟ್ ಆಗಿರುತ್ತಾರೆ. ನಾವು ಬೇರೆ ಬೇರೆ ಏಜೆನ್ಸಿಗಳಿಗೆ ಸಗಟು ಡ್ರಗ್ ವ್ಯಾಪಾರಿಗಳಿಗೆ ಡ್ರಗ್ ನ್ನು ಸರಬರಾಜು ಮಾಡುತ್ತೇವೆ. ಸದರಿ ಸಗಟು ವ್ಯಾಪಾರಿಗಳಿಂದ ನಮಗೆ ಪರ್ಚೇಸ್ ಆರ್ಡರ್ ಬರುತ್ತದೆ. ಅದರಂತೆ ನಾವು ಇನ್ವಾಯ್ಸ್ ಮಾಡಿ ಸರಬರಾಜು ಮಾಡುತ್ತೇವೆ. ನಾವು ಇನ್ವಾಯ್ಸ್ ಮೂಲಕ ಸರಬರಾಜು ಮಾಡಿದ ನಂತರ ಹಣವನ್ನು ನಮಗೆ ಚೆಕ್ ಅಥವಾ ಡಿಡಿ ಮೂಲಕ ಕೊಡುತ್ತಾರೆ.

2.ಶಿವಮೊಗ್ಗದ ರಾಜು ಏಜೆನ್ಸಿಯವರು ಸಪ್ನಾ ಫಾರ್ಮಾಸ್ಯೂಟಿಕಲ್ಸ್ ನಿಂದ ಡ್ರಗ್ ಗಳನ್ನು 2005-2010ರವರೆಗೆ ಖರೀದಿ ಮಾಡುತ್ತಿದ್ದರು. ಅವರ ಪರ್ಚೇಸ್ ಆರ್ಡರ್ ಮೇರೆಗೆ ನಾವು ಡ್ರಗ್

ಸರಬರಾಜು ಮಾಡುತ್ತಿದ್ದೆವು. ಅವರು ನಿಯಾನ್ ಲ್ಯಾಬೋರೇಟರೀಸ್ ಲಿಮಿಟೆಡ್ ಎಂಬ ಇಂಜೆಕ್ಷನ್ ತಯಾರಿಸುವ ಕಂಪೆನಿ ಏಜೆಂಟ್ ಆಗಿದ್ದರು. ಕರ್ನಾಟಕದ ಸಗಟು ವ್ಯಾಪಾರಿಗಳಿಗೆ ಆ ಇಂಜೆಕ್ಷನ್ ಗಳನ್ನು ಸರಬರಾಜು ಮಾಡಲು ನಮ್ಮನ್ನು ನಿಯಾನ್ ಕಂಪೆನಿಯವರು ನೇಮಕ ಮಾಡಿದ್ದರು. ಸದರಿ ರಾಜು ಏಜೆನ್ಸಿಯವರು ನೋವುನಿವಾರಕ ಡ್ರಗ್ bupregesic ಎಂಬ ಇಂಜೆಕ್ಷನ್ ನ್ನು ನಮ್ಮಿಂದ ತರಿಸಿಕೊಂಡಿರುತ್ತಾರೆ. ಆ ಬಗ್ಗೆ ಅವರು ನಮಗೆ ಚೆಕ್ ಮೂಲಕ ಹಣ ಪಾವತಿ ಮಾಡುತ್ತಿದ್ದರು.

3.ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಓಡಿಯ ಚಾಸಾ-58ರವರು ನಮ್ಮ ಸಪ್ನಾ ಫಾರ್ಮಾಸ್ಯೂಟಿಕಲ್ಸ್ ಗೆ ಬಂದು ಶ್ರೀ ರಾಜು ಏಜೆನ್ಸಿಗೆ bupregesic ಇಂಜೆಕ್ಷನ್ ನ್ನು ಸರಬರಾಜು ಮಾಡಿದ ಬಗ್ಗೆ ಕೆಲವು ಇನ್ವಾಯ್ಸ್ ಗಳನ್ನು ತಂದಿದ್ದರು. ಅದನ್ನು ನಮಗೆ ತೋರಿಸಿ ಇದನ್ನು ನೀವು ಸರಬರಾಜು ಮಾಡಿದ್ದಾ ಎಂದು ಕೇಳಿದರು, ಅದಕ್ಕೆ ನಾನು ಹೌದು ಎಂದು ಹೇಳಿದೆನು. ಅವರು ಆ 4 ವರ್ಷಗಳ ಅವಧಿಯಲ್ಲಿ ಎಷ್ಟು ಇಂಜೆಕ್ಷನ್ ಗಳನ್ನು ಖರೀದಿ ಮಾಡಿರುತ್ತಾರೆ ಎನ್ನುವ ವಿವರ ಕೋರಿದ್ದರು. ಅದರಂತೆ ನಾನು ಆ ಇಂಜೆಕ್ಷನ್ ನ್ನು ಮಾರಾಟ ಮಾಡಿದ ಬಗ್ಗೆ 5 ವರ್ಷಗಳ ಸ್ಟೇಟ್ಮೆಂಟ್ ಮತ್ತು ಸದರಿ ಏಜೆನ್ಸಿಯವರಿಂದ ನಮಗೆ ಹಣ ಬಂದ ಬಗ್ಗೆ ನಮ್ಮ ಬ್ಯಾಂಕ್ ನ ಸ್ಟೇಟ್ಮೆಂಟ್ ಮತ್ತು ಅವರಿಂದ ಆರ್ಡರ್ ಸ್ವೀಕರಿಸಿದ ಬಗ್ಗೆ ಪ್ರತಿಗಳು ಇತ್ಯಾದಿಗಳನ್ನು ಕೊಟ್ಟಿರುತ್ತೇನೆ. ಸಪ್ನಾ ಫಾರ್ಮಾಸ್ಯೂಟಿಕಲ್ಸ್ ನ ವ್ಯವಹಾರವು ಐಎನ್‌ಜಿ ವೈಶ್ಯ ಬಾಂಕ್ ಮೂಲಕ ನಡೆಯುತ್ತದೆ. ಅದನ್ನು ದಿನಾಂಕಃ 27-3-10ರ ಪತ್ರದೊಂದಿಗೆ ನೀಡಿರುತ್ತೇನೆ. ಆ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-84 ಎಂದು ಸಾಕ್ಷಿಯ ರುಜುವನ್ನು ನಿಪಿ-84(ಎ) ಎಂದು ಗುರುತಿಸಲಾಯಿತು. ಆ 5 ವರ್ಷಗಳಲ್ಲಿ ಒಟ್ಟು 82,800 ಆ್ಯಂಪ್ಯೂಲ್ ಇಂಜೆಕ್ಷನ್ ಗಳನ್ನು ಖರೀದಿ ಮಾಡಿರುತ್ತೇವೆ. ಈ ಬಗ್ಗೆ ನಾನು ನಿಪಿ-84ರಲ್ಲಿ ಹಿಂಬರಹ ನೀಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-84(1) ಎಂದು ಸಾಕ್ಷಿಯ ರುಜುವನ್ನು ನಿಪಿ-84(1ಎ) ಎಂದು ಗುರುತಿಸಲಾಯಿತು. <u>(ಸದರಿ ಇನ್ವಾಯ್ಸ್ ಮತ್ತು ನಾವು ನೀಡಿರುವ ಮೇಲೆ ಹೇಳಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಗಳನ್ನು ದೋ.ಪಟ್ಟಿಯೊಂದಿಗೆ ತನಿಖಾಧಿಕಾರಿ ಸಲ್ಲಿಸಿರುವುದಿಲ್ಲ, ಆದ್ದರಿಂದ ನಿಶಾನೆಯಾಗಿ ಗುರುತಿಸಲಾಗಿಲ್ಲ. ಈ ಬಗ್ಗೆ ತನಿಖಾಧಿಕಾರಿ ಚಾಸಾ-58ರವರ ವಿಚಾರಣೆ ಸಮಯದಲ್ಲಿ ಖಚಿತಪಡಿಸಿಕೊಂಡು ಅವಶ್ಯಕತೆ ಇದ್ದಲ್ಲಿ ಸಾಕ್ಷಿಯ</u>

ಮುಂದುವರೆದ ವಿಚಾರಣೆಯನ್ನು ಮಾಡಲು ಅನುಮತಿಯನ್ನು ನೀಡಿ ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿದೆ) ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ 1**ನೇ **ಆರೋಪಿ ಪರ** ಶ್ರೀ ಎ ಹೆಚ್ ಬಿ **ವಕೀಲರಿಂದಃ**

ನಾನು ಸಪ್ನಾ ಫಾರ್ಮಾಸ್ಯೂಟಿಕಲ್ಸ್ ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡಿಕೊಂಡಿದ್ದೆ ಎನ್ನುವ ಬಗ್ಗೆ ತನಿಖಾಧಿಕಾರಿಗೆ ದಾಖಲೆ ಕೊಟ್ಟಿಲ್ಲ. ಆ ಬಗ್ಗೆ ನ್ಯಾಯಾಲಯಕ್ಕೂ ದಾಖಲೆ ನೀಡಿಲ್ಲ ಎಂದರೆ ನಿಜ. ಪೊಲೀಸರು ಮಾಡಿಕೊಂಡಿದ್ದಾರೆಂದು ಹೇಳುವ ನನ್ನ ಹೇಳಿಕೆಗೆ ನಾನು ಸಹಿ ಹಾಕಿಲ್ಲ, ಸಾಕ್ಷಿಯು ನಾನು ಕೊಟ್ಟ ಪತ್ರಕ್ಕೆ ಸಹಿ ಹಾಕಿಕೊಟ್ಟಿದ್ದೇನೆ ಎನ್ನುತ್ತಾರೆ. ನಾವು Bupregesic injection ಅಲ್ಲದೆ ಇತರ ಔಷಧಿಗಳನ್ನು ಸರಬರಾಜು ಮಾಡುತ್ತೇವೆ. ನಿಪಿ-84ರಲ್ಲಿ ಯಾವ ಯಾವ ದಿನಾಂಕದಂದು ಎಷ್ಟೆಷ್ಟು ಪ್ರಮಾಣದ ಇಂಜೆಕ್ಷನ್ ನ್ನು ಯಾವ ಯಾವ ಇನ್ವಾಯ್ಸ್ ಅಡಿ ನೀಡಿರುತ್ತೇವೆ ಎಂಬ ಬಗ್ಗೆ ನಮೂದನೆ ಇಲ್ಲ ಎಂದರೆ ಸರಿ. ಪೊಲೀಸರು ನನಗೆ ವಿವರಗಳನ್ನು ನೀಡುವಂತೆ ಬರವಣಿಗೆಯಲ್ಲಿ ಕೇಳಿಲ್ಲ. ಪೊಲೀಸರ ಕೋರಿಕೆ ಮೇರೆಗೆ ದಾಖಲಾತಿಗಳನ್ನು ಸೃಷ್ಟಿಸಿ ಕೊಟ್ಟದ್ದು ಎಂದರೆ ಸಾಕ್ಷಿಯ ನಮ್ಮಲ್ಲಿ ಲಭ್ಯವಿದ್ದ ದಾಖಲೆಗಳನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ.

(2ನೇ ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲವೆಂದು ಹೇಳಿರುತ್ತಾರೆ.)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**